ನಿ.330



**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿ ಇವರು ನಿಯಮ 330 ರಡಿ ಮಂಡಿಸಿರುವ ಸೂಚನಾ ಪತ್ರಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಹೇಳಿಕೆ.**

**ವಿಷಯ: ರಾಜ್ಯದಲ್ಲಿ ಭೂ ದಾಖಲೆಯ ಅಕ್ರಮ ತಡೆಗಟ್ಟಲು ರಾಜ್ಯ ಸರ್ಕಾರ 2013 ರಲ್ಲಿ ಇ-ಸ್ವತ್ತು ತಂತ್ರಾಂಶ ಜಾರಿಗೆ ತಂದಿದ್ದರೂ, ರಾಜ್ಯದ ಅನೇಕ ಜಿಲ್ಲೆಗಳ ನಗರ ಪ್ರದೇಶಗಳಲ್ಲಿ ಗೊತ್ತು ಗುರಿ ಇಲ್ಲದ ಅಕ್ರಮ ಬಡಾವಣೆಗಳಲ್ಲಿಯೂ ಪಿಡಿಓಗಳ ಹಾಗೂ ಇತರೆ ಅಧಿಕಾರಿಗಳ ಕೈಚಳಕದಿಂದ ಇ-ಸ್ವತ್ತು ವ್ಯವಸ್ಥೆಯಲ್ಲಿ "11ಬಿ" ಯ ಮಾನ್ಯತಾ ಪತ್ರವನ್ನು ನೀಡುತ್ತಿರುವುದರಿಂದ, ಸರ್ಕಾರದ ಬೊಕ್ಕಸಕ್ಕೆ ಆದಾಯ ಸೋರಿಕೆಯಾಗುತ್ತಿರುವುದರ ಬಗ್ಗೆ.**

**ಉತ್ತರ:.** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕ್ರಮಬದ್ಧ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಿಗಧಿತ ನಮೂನೆ 9 ಹಾಗೂ 11 ಎ ರಲ್ಲಿ ಮತ್ತು ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಮೂನೆ-11ಬಿ ರಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಡಿಜಿಟಲ್ ಸಹಿಯ ಮೂಲಕ ವಿತರಿಸುತ್ತಿವೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿಯಮಗಳು, ಸುತ್ತೋಲೆಗಳು ಮತ್ತು ಆಗಿಂದಾಗ್ಗೆ ಸರ್ಕಾರದ ಪತ್ರಗಳ ಮೂಲಕ ನೀಡುವ ನಿರ್ದೇಶನಗಳನ್ನು ಉಲ್ಲಂಘಿಸಿ ನಮೂನೆ 9, 11ಎ ಮತ್ತು ನಮೂನೆ 11ಬಿ ವಿತರಿಸಲು ಕಾರಣಕರ್ತರಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ವಿರುದ್ಧ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರಂತೆ ಶಿಸ್ತು ಕ್ರಮ ಕೈಗೊಳ್ಳಲು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಈಗಾಗಲೇ ತಿಳಿಸಲಾಗಿದೆ.

ಮುಂದುವರೆದು, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳು ನಿಯಮಬಾಹಿರವಾಗಿ ನಮೂನೆ 9, 11ಎ ಮತ್ತು 11ಬಿ ವಿತರಿಸಲು ಕಾರಣರಾದಲ್ಲಿ ದುರ್ವತನೆ ಎಂದು ಪರಿಗಣಿಸಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ), 48(4) ಮತ್ತು 48(5) ರನ್ವಯ ಕ್ರಮವಾಗಿ ಗ್ರಾಮ ಪಂಚಾಯಿತಿ ಸದಸ್ಯತ್ವ, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದಿಂದ ತೆಗೆದುಹಾಕಲು ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ವಹಿಸುವಂತೆ ತಿಳಿಸಲಾಗಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ನಮೂನೆ-11 'ಬಿ' ವಿತರಣೆಯಲ್ಲಿ ಅಕ್ರಮ ಎಸಗಿರುವ ಈ ಕೆಳಕಂಡ ಸಿಬ್ಬಂದಿಗಳ ವಿರುದ್ಧ ಮುಂದಿನಂತೆ ಕ್ರಮ ಜರುಗಿಸಲಾಗಿದೆ.

**ಅರಕೆರೆ ಗ್ರಾಮ ಪಂಚಾಯಿತಿ,**

ಶ್ರೀ ಕೆ.ಶಿವಶಂಕರ್ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರನ್ನು ದಿ:26.06.2014ರಂದು ಅಮಾನತ್ತುಗೊಳಿಸಿ, ದಿನಾಂಕ:02.03.2015ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಿ ದಿನಾಂಕ:03.10.2015ರಂದು ದಂಡ ವಿಧಿಸಿದ ದಿನಾಂಕದಿಂದ ಅವರಿಗೆ ನಿವೃತ್ತಿ ವೇತನದಲ್ಲಿ ಒಂದು ವರ್ಷದ ಅವಧಿಗೆ ನಿವೃತ್ತಿ ಪೂರ್ವದಲ್ಲಿ ಪಡೆಯುತ್ತಿದ್ದ ವಾರ್ಷಿಕ ವೇತನದ ದರವನ್ನು ಕಟಾಯಿಸಲಾಗಿದೆ.

ಶ್ರೀ ಎಸ್.ವಿ.ವೆಂಕಟರಂಗನ್, ಕಾರ್ಯದರ್ಶಿ, ಇವರನ್ನು ದಿನಾಂಕ:26.06.2014ರಂದು ಅಮಾನತ್ತುಗೊಳಿಸಿ ದಿನಾಂಕ:02.03.2015ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಿ ದಿನಾಂಕ:03.10.2015ರ ಆದೇಶದಂತೆ ಒಂದು ವಾರ್ಷಿಕ ವೇತನವನ್ನು ಸಂಚಿತ ಪರಿಣಾಮರಹಿತವಾಗಿ ತಡೆಯಿಸಿಯಲಾಗಿದೆ.

**ಮಾರೇನಹಳ್ಳಿ ಗ್ರಾಮ ಪಂಚಾಯಿತಿ**

ಶ್ರೀ ಬಿ.ಎನ್.ರಾಜಾಶಂಕರ್, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಇವರನ್ನು ದಿ:17.10.2014 ರಂದು ಅಮಾನತ್ತುಗೊಳಿಸಿ ದಿನಾಂಕ:09.03.2015ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಿ ದಿನಾಂಕ:26.08.2016ರ ಆದೇಶದಲ್ಲಿ ಆರೋಪಿತರನ್ನು ಗ್ರೇಡ್-1 ಕಾರ್ಯದರ್ಶಿ ಹುದ್ದೆಯಿಂದ ಗ್ರೇಡ್-2 ಕಾರ್ಯದರ್ಶಿ ಹುದ್ದೆಗಿಳಿಸಿದೆ.

**ಹೆಸರಘಟ್ಟ ಗ್ರಾಮ ಪಂಚಾಯಿತಿ**

ಶ್ರೀ ಎಸ್.ಎಸ್. ಗಿರೀಶ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರನ್ನು ದಿ:26.06.2014ರ ಆದೇಶದಲ್ಲಿ ಅಮಾನತ್ತುಗೊಳಿಸಿ ದಿ:29.09.2015ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಲಾಗಿ ದಿ:13.06.2018ರಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು ಆರೋಪ ಮುಕ್ತಗೊಳಿಸಿ ಆದೇಶಿಸಿದೆ.

ಶ್ರೀ ಎಸ್.ಗಿರಿಯಪ್ಪ, ಕಾರ್ಯದರ್ಶಿ ಇವರನ್ನು ದಿ:26.06.2014ರ ಆದೇಶದಲ್ಲಿ ಅಮಾನತ್ತುಗೊಳಿಸಿ ದಿ:29.09.2015ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಲಾಗಿ ತದನಂತರದಲ್ಲಿ ಇವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ.

**ಹುರುಳಿಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ**

ಶ್ರೀಮತಿ ಕೋಮಲ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರನ್ನು ದಿ:26.06.2014ರಲ್ಲಿ ಅಮಾನತ್ತುಗೊಳಿಸಿ ದಿ:29.09.2015ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಲಾಗಿದ್ದು, ನಂತರ ಆರೋಪ ಮುಕ್ತಗೊಳಿಸಿದೆ.(ನಿವೃತ್ತಿ)

ಶ್ರೀ ಎಸ್.ಗಿರಿಯಪ್ಪ, ಕಾರ್ಯದರ್ಶಿ ಇವರನ್ನು ದಿ:26.06.2014ರ ಆದೇಶದಲ್ಲಿ ಅಮಾನತ್ತುಗೊಳಿಸಿ ದಿ:29.09.2015ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಲಾಗಿ ತದನಂತರದಲ್ಲಿ ಇವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ.

**ಬಾಗಲೂರು ಗ್ರಾಮ ಪಂಚಾಯಿತಿ**

ಶ್ರೀ ನರೇಂದ್ರಬಾಬು, ಕಾರ್ಯದರ್ಶಿ, ಇವರನ್ನು ದಿ:01.09.2015ರ ಆದೇಶದಲ್ಲಿ ಅಮಾನತ್ತುಗೊಳಿಸಿ ದಿ:12.05.2016 ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಲಾಗಿ ತದನಂತರ ಇವರನ್ನು ದಿನಾಂಕ: 31.07.2017 ರಂದು ಆರೋಪ ಮುಕ್ತಗೊಳಿಸಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತಿಗಳಲ್ಲಿ ಅನಧಿಕೃತ ನಿವೇಶನಗಳಿಗೆ ಮತ್ತು ಕಟ್ಟಡಗಳಿಗೆ ಇ-ಸ್ವತ್ತು ಮೂಲಕ ನಮೂನೆ-11ಬಿ ನೀಡಿರುವ ಬಗ್ಗೆ ಕಂಡು ಬಂದಿದ್ದು, ಸದರಿ ಅನಧಿಕೃತ ನಿವೇಶನಗಳಿಗೆ ಮತ್ತು ಕಟ್ಟಡಗಳಿಗೆ ಇ-ಸ್ವತ್ತು ಮೂಲಕ ನಮೂನೆ-11ಬಿ ನೀಡಿರುವ 16 ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಅಮಾನತ್ತು ಮಾಡಿ ಪುನಃ ಸೇವೆಗೆ ಮರು ಸ್ಥಾಪಿಸಿ ಇಲಾಖಾ ವಿಚಾರಣೆಯನ್ನು ಜರುಗಿಸಲಾಗುತ್ತಿದ್ದು, ವಿಚಾರಣೆಯು ಅಂತಿಮ ಹಂತದಲ್ಲಿರುತ್ತದೆ.

**(ಕೆ.ಎಸ್. ಈಶ್ವರಪ್ಪ)**
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಸಂಖ್ಯೆ: ಗ್ರಾಅಪ 281 ಗ್ರಾಪಂಅ 2020.